# ಶ್ರೀನಿವಾಸನು ಒಲಿಯನು ಕೇಳೋ

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 285.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Sri. Pavanje Guru Rao and also in the books of Gorebala Hanumantha Rayaru.
3. **Note:** These wordings are followed by the singer.

ಶ್ರೀನಿವಾಸನು ಒಲಿಯನು ಕೇಳೋ
ಜ್ಞಾನೋಪಾರ್ಜನೆ ಮಾಡದಲೆ || ಪ ||

ಏನೇನೋ ಸತ್ಕರ್ಮವ ಮಾಡಲು
ಪ್ರಾಣೇಶಾರ್ಪಣವೆನ್ನದಲೆ || ಅಪ ||

ಸ್ನಾನವು ಸಂಧ್ಯಾವಂದನ ಜಪ ತಪ
ಜ್ಞಾನ ಸಾಧನವಿದೆನ್ನದಲೆ
ದಾನ ಧರ್ಮಗಳು ಈಶನ ಅನು
ಸಂಧಾನವ ಮಾಡಿ ಮಾಡದಲೆ || 1 ||

ಕಾಮ ಕ್ರೋಧ ಲೋಭದಿ ದುರಾತ್ಮಕ
ಆ ಮಹಾ ರಿಪುಗಳ ಜಯಿಸದಲೆ
ಪ್ರೇಮಾದಿ ಶ್ರೀಹರಿ ಭಕುತರ ಚರಣದಿ
ನೇಮದಿ ನಿತ್ಯ ನಮಿಸದಲೆ || 2 ||

ಬಾಲಕ ಸತಿ ಮೊದಲಾದ ಜನರು ಶ್ರೀ
ಲೋಲನ ಸೇವಕರೆನ್ನದಲೆ
ಕಾಲ ದೇಶ ಅಸು ಮೊದಲಾದುವು
ಗೋಪಾಲಗೆ ಆಧೀನವೆನ್ನದಲೆ || 3 ||

ಸಾಧು ಸಂಗದಲಿ ತೀರ್ಥಯಾತ್ರೆಗಳ
ಪಾದದಿ ನಡೆದು ನೀ ಮಾಡದಲೆ
ಭೇದಪಂಚಕವು ಜಗದಿ ಅಭೇದವ
ಮಾಧವನಲಿ ನೀ ತಿಳಿಯದಲೆ || 4 ||

ಒಂದು ಕ್ಷಣವು ಬಿಡದಿಂದಿರೇಶ
ಗೋವಿಂದನಂಘ್ರಿಯ ನೆನೆಯದಲೆ
ವಂದ್ಯನು ಶ್ರೀ ಪುರಂದರ ವಿಠ್ಠಲ
ಬಂಧಕ ಮೋಚಕನೆನ್ನದಲೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಹಾರಿಪುಗಳ** – ಅರಿಷಡ್ವರ್ಗಗಳೆನಿಸಿಕೊಳ್ಳುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ.
**ಅಸು** – ಪ್ರಾಣ.

**ಭೇದಪಂಚಕವು** – ಜಿವಕ್ಕೂ ಜಡಕ್ಕೂ, ಜೀವಕ್ಕೂ ಜೀವಕ್ಕೂ, ಜೀವಕ್ಕೂ ಈಶನಿಗೂ, ಜಡಕ್ಕೂ ಈಶನಿಗೂ, ಜಡಕ್ಕೂ ಜಡಕ್ಕೂ ಇರುವ ಭೇದ; ಐದು ಬಗೆಯ ಈ ಭೇದಗಳು ಪಂಚಭೇದವೆಂಬುದು ದ್ವೈತ ವೇದಾಂತದ ಪ್ರಮೇಯ.

**Classification:** Keerthane
**Ankita:** sri purandara vittala
**Location:** Tirupati
**Category:** Srinivasa Stuti, Jeevanoddhara
**Sub-Category:** srinivasa, jnana, karma, hanuma, snana, japa, tapa, sadhana, dAna, dharma, paramatma, kAma, sittu, shatru, patni, Krishna, prema, jana, Gopala, sadhu, loka, Madhava, govinda,
**Pravachana:** NA
**Explanation:** NA